ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ,
ಚಿಕ್ಕಮಗಳೂರು.

**ಸಿ.ಸಿ. ನಂ.1418/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಮಹಮದ್ ಸಲೀಂ ಅಬ್ಬಾಸ್ | ಪಿ.ಡಬ್ಲ್ಯೂ. 3 |
| ಗಂಡನ ಹೆಸರು | ಃ | ಅಬ್ಬಾಸ್.ಎಂ.ಪಿ. | ಸಿ. ಡಬ್ಲ್ಯೂ.1 |
| ವಯಸ್ಸು | ಃ | 44 ವರ್ಷ | |
| ವೃತ್ತಿ | ಃ | ಪಿ.ಐ., ಲಷ್ಕರ್ ಪೋಲೀಸ್ ಠಾಣೆ | |
| ವಾಸ | ಃ | ಮೈಸೂರು | |

**ದಿನಾಂಕಃ21-03-2024 ರಂದು ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-**

ನಾನು ಜುಲೈ-2019 ರಿಂದ ಆಗಸ್ಟ್ -2020 ರವರೆಗೆ ನಗರ ವೃತ್ತದಲ್ಲಿ ಸಿ.ಪಿ.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ02-11-2019 ರಂದು ಮಧ್ಯಾಹ್ನ 3-30 ಗಂಟೆಗೆ ನಾನು ಕಛೇರಿಯಲ್ಲಿರುವಾಗ ಉಪ್ಪಳ್ಳಿ ವಾಸಿ ವಸೀಂ ಎನ್ನುವವನು ಎಐಟಿ ಸರ್ಕಲ್ ನಲ್ಲಿ ಎಐಟಿ ಕಾಲೇಜು ವಿದ್ಯಾರ್ಥಿಗಳಿಗೆ ಗಾಂಜಾವನ್ನು ಎಲ್ಲಿಂದಲೋ ತೆಗೆದುಕೊಂಡು ಬಂದು ಮಾರಾಟ ಮಾಡುತ್ತಿದ್ದು ಈ ದಿನ ಸಂಜೆ 6-0 ರಿಂದ 7-00 ಗಂಟೆ ಮಧ್ಯೆ ಕೆಎ-04/ಎಂಎ-9892 ಮಾರುತಿ ಕಾರಿನಲ್ಲಿ ದಂಟರಮಕ್ಕಿಯಿಂದ ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದ ಮಾರ್ಗವಾಗಿ ಗಾಂಜಾವನ್ನು ತೆಗೆದುಕೊಂಡು ಹೋಗುತ್ತಿದ್ದಾನೆ ಎಂಬ ಬಗ್ಗೆ ಖಚಿತ ಮಾಹಿತಿ ಬಂದಿದ್ದು, ಈ ಬಗ್ಗೆ ಸಿಪಿಐ ದಿನಚರಿಯಲ್ಲಿ ನಮೂದು ಮಾಡಿ, ಧಾಳಿ ಮಾಡಲು ಅನುಮತಿ ಮತ್ತು ಶೋಧನಾ ವಾರೆಂಟನ್ನು ಕೋರಿ ಎಸ್.ಪಿ. ರವರಿಗೆ ಪತ್ರ ವ್ಯವಹಾರ ಮಾಡಿರುತ್ತೇನೆ. ಎಸ್.ಪಿ.ರವರು ಶೋಧನಾ ವಾರಂಟನ್ನು ನೀಡಿರುತ್ತಾರೆ. ಧಾಳಿ ಮಾಡುವ ಸಮಯ ಪತ್ರಾಂಕಿತ ಅಧಿಕಾರಿಗಳು ಬಂದು ಧಾಳಿಗೆ ಸಹಕರಿಸುವಂತೆ ಐಡಿಎಸ್.ಜಿ. ಪ್ರಾಂಶುಪಾಲರಿಗೆ ಪತ್ರ ವ್ಯವಹಾರ ಮಾಡಿರುತ್ತೇನೆ. ಇಬ್ಬರು ಪಂಚರನ್ನು ಕಳಿಸುವಂತೆ ತಹಸೀಲ್ದಾರರಿಗೆ ಪತ್ರ ವ್ಯವಹಾರ ಮಾಡಿರುತ್ತೇನೆ. ಸಂಜೆ 5-00 ಗಂಟೆಗೆ

ಐಡಿಎಸ್.ಜಿ. ಕಾಲೇಜಿನಿಂದ ನಟರಾಜ್ ಮತ್ತು ತಾಲ್ಲೂಕು ಕಛೇರಿಯಿಂದ ಮನೋಜ್ ರವರು ಬಂದಿರುತ್ತಾರೆ.

ಇವರುಗಳಿಗೆ ಗಾಂಜಾದ ಬಗ್ಗೆ ಮಾಹಿತಿ ತಿಳಿಸಿ, ನೋಟೀಸ್ ಜಾರಿ ಮಾಡಿರುತ್ತೇನೆ. ಇವರುಗಳು ಪಂಚರಾಗಿ ಬರಲು ಒಪ್ಪಿಕೊಂಡಿರುತ್ತಾರೆ. ಠಾಣಾಧಿಕಾರಿಗಳಾದ ಚಾಸಾ4 ರಿಂದ 7 ರವರುಗಳನ್ನು ಹಾಗೂ ಪ್ರಕಾಶ್ ಎನ್ನುವವರನ್ನು ಜೊತೆ ಮಾಡಿಕೊಂಡಿರುತ್ತೇನೆ. ನಂತರ ಧಾಳಿಗೆ ಹೋಗುವ ನಮ್ಮನ್ನು, ಸಿಬ್ಬಂದಿಗಳನ್ನು ಹಾಗೂ ಇಲಾಖ ವಾಹನ ಕೆಎ-18/ಜಿ-1011 ಅನ್ನು ಶೋಧಿಸಿ ಧಾಳಿ ಪೂರ್ವ ಮಹಜರ್ ಮಾಡುವಂತೆ ಚಾಸಾ2 ರವರನ್ನು ಕೋರಿರುತ್ತೇನೆ. ಇವರು ಚಾಸಾ8 ಮತ್ತು 9 ರವರ ಸಮಕ್ಷಮ ನನ್ನ, ಸಿಬ್ಬಂದಿಗಳ ಹಾಗೂ ಇಲಾಖಾ ವಾಹನವನ್ನು ಶೋಧಿಸಿ ಧಾಳಿ ಪೂರ್ವ ಮಹಜರ್ ಮಾಡಿರುತ್ತಾರೆ. ಈ ಸಮಯ ಛಾಯಾಚಿತ್ರ ತೆಗೆಯಲಾಗಿರುತ್ತದೆ. ನಂತರ ಪಂಚರು, ಸಿಬ್ಬಂದಿಗಳು, ಪತ್ರಾಂಕಿತ ಅಧಿಕಾರಿಗಳೊಂದಿಗೆ ಇಲಾಖಾ ವಾಹನದಲ್ಲಿ ಚಿಕ್ಕಮಗಳೂರು ನಗರದ ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದ ಬಳಿ ತಲುಪಿರುತ್ತೇವೆ. ಕ್ರೀಡಾಂಗಣದ ಕಾಂಪೌಂಡ್ ಬಳಿ ನಿಂತು ಕಾಯುತ್ತಿರಬೇಕಾದರೆ 6-20 ಗಂಟೆಗೆ ದಂಟರಮಕ್ಕಿ ಕಡೆಯಿಂದ ಒಂದು ಆಲ್ಟೋ ಸುಜುಕಿ ಕಾರು ಸಂಖ್ಯೆಃಕೆಎ-04/ಎಂಎ-9892 ಬಂದಿದ್ದು, ಸದರಿ ಕಾರನ್ನು ಅಡ್ಡ ಹಾಕಿ ಬದಿಗೆ ನಿಲ್ಲಿಸುವಂತೆ ಸೂಚಿಸಿದ್ದು, ಚಾಲಕನು ಕಾರನ್ನು ಬದಿಗೆ ನಿಲ್ಲಿಸಿ, ಓಡಿಹೋಗಲು ಪ್ರಯತ್ನಿಸಿದ್ದು, ಚಾಸಾ-5 ಮತ್ತು 7 ರವರು ಆತನನ್ನು ಹಿಡಿದು ನನ್ನ ಮತ್ತು ಚಾಸಾ2 ರವರ ಮುಂದೆ ಹಾಜರುಪಡಿಸಿರುತ್ತಾರೆ.

ಪತ್ರಾಂಕಿತ ಅಧಿಕಾರಿ ಹಾಗೂ ಪಂಚರ ಸಮಕ್ಷಮ ವಿಚಾರ ಮಾಡಿದಾಗ ಆತನು ತನ್ನ ಹೆಸರನ್ನು ವಸೀಂ ಯಾನೆ ಚಿಟ್ಟ ಬಿನ್ ಶಂಶುದ್ದೀನ್, ಉಪ್ಪಳ್ಳಿ ಎಂದು ತಿಳಿಸಿರುತ್ತಾನೆ. ಕಾರಿನಲ್ಲಿ ಏನಿದೆ ಎಂದು ಕೇಳಲಾಗಿ ತರಗಿನಪೇಟೆ ವಾಸಿ ಇಬ್ಬು ಅಲಿಯಾಸ್ ಗಾಂಜಾ ಇಬ್ಬು ಎನ್ನುವವನು ತನಗೆ ಪರಿಚಯವಿದ್ದು ಆತನು ತನಗೆ ಗಾಂಜಾ ಮಾಡಲು ತಂದು ಕೊಡುತ್ತಿದ್ದು, ನಾನು ಅದನ್ನು ತಲಾ 10 ಗ್ರಾಂ ನಂತೆ ಚಿಕ್ಕ ಚಿಕ್ಕ ಪ್ಯಾಕೆಟ್ ಗಳನ್ನು ಮಾಡಿ, ಎಐಟಿ ಸರ್ಕಲ್ ನಲ್ಲಿ ವಿದ್ಯಾರ್ಥಿಗಳಿಗೆ ಮಾರಾಟ ಮಾಡಿಕೊಂಡು ಬರುತ್ತಿರುತ್ತೇನೆ, ವಾರಕ್ಕೆ 2 ಬಾರಿ ಇಬ್ಬು ಹೇಳಿದಂತೆ ಮಾರಾಟ ಮಾಡುತ್ತೇನೆ ಎಂದು ತಿಳಿಸಿರುತ್ತಾನೆ. ಒಂದು ಪ್ಯಾಕೆಟ್ ನ 10 ಗ್ರಾಂ ಗಾಂಜಾವನ್ನು ರೂ.300/- ಗಳಿಗೆ ಮಾರಾಟ ಮಾಡುತ್ತಿದ್ದು, ಮಾರಾಟ ಮಾಡಿದ ಹಣಕ್ಕೆ ಶೇ.20 ಅನ್ನು ಕಮಿಷನ್

ಕೊಡುತ್ತಾನೆ ಎಂದು ತಿಳಿಸಿರುತ್ತಾನೆ. ಈ ದಿನ ಕೂಡ ಗಾಂಜಾವನ್ನು ಮಾರಾಟ ಮಾಡಲು ತನಗೆ ಕೊಟ್ಟಿದ್ದು ಅದನ್ನು ಮಾರಾಟ ಮಾಡಲು ತಾನು ಎಐಟಿ ಸರ್ಕಲ್ ಗೆ ಹೋಗುತ್ತಿದ್ದೇನೆ ಎಂದು ತಿಳಿಸಿರುತ್ತಾನೆ. ಗಾಂಜಾ ಎಲ್ಲಿದೆ ಎಂದು ಕೇಳಲಾಗಿ ಕಾರಿನ ಡ್ಯಾಷ್ ಬೋರ್ಡಿನಲ್ಲಿ ಇದೆ ಎಂದು ತಿಳಿಸಿರುತ್ತಾನೆ. ಕಾರಿನ ಬಗ್ಗೆ ಕೇಳಲಾಗಿ ಅದು ತನ್ನ ಅಕ್ಕ ಚಾಸಾ-12 ರವರಿಗೆ ಸೇರಿರುತ್ತದೆ ಎಂದು ತಿಳಿಸಿರುತ್ತಾನೆ.

ನಂತರ ಕಾರನ್ನು ಮತ್ತು ಆತನನ್ನು ಶೋಧನೆ ಮಾಡಲು ಕೇಳಲಾಗಿ ಆತನು ಪತ್ರಾಂಕಿತ ಅಧಿಕಾರಿಗಳ ಸಮಕ್ಷಮ ಶೋಧನೆ ಮಾಡಲು ಬಯಸಿರುತ್ತಾನೆ. ಈ ಬಗ್ಗೆ ಆತನಿಗೆ ನೋಟೀಸ್ ಜಾರಿ ಮಾಡಿರುತ್ತೇನೆ. ಗಾಂಜಾವನ್ನು ಮಾರಾಟ ಮಾಡಲು ಸಾಗಿಸಲು ಲೈಸೆನ್ಸ್ ಇದೆಯೇ ಎಂದು ಕೇಳಲಾಗಿ ಆತನು ಇಲ್ಲ ಎಂದು ಹೇಳಿದ ಮೇರೆಗೆ ಆತನನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ. ನಂತರ ಚಾಸಾ-2 ರವರು ರಸ್ತೆ ಬದಿಯಲ್ಲಿ ನಿಂತಿದ್ದ ಕಾರನ್ನು ಹಾಗೂ ಆರೋಪಿಯನ್ನು ಪಂಚರ ಸಮಕ್ಷಮ ಶೋಧನೆ ಮಾಡಲಾಗಿ, ಕಾರಿನ ಡ್ಯಾಶ್ ಬೋರ್ಡಿನಲ್ಲಿ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು, ಅದನ್ನು ತೆಗೆದು ನೋಡಲಾಗಿ ಅದರ ಒಳಗೆ ಬೀಜ, ಕಾಂಡ, ಹೂವು ಹಣ್ಣು ಹಾಗೂ ಎಲೆಗಳಿಂದ ಕೂಡಿದ ಗಾಂಜಾ ಇರುವುದು ಕಂಡು ಬಂತು. ಠಾಣೆಯಿಂದ ತೆಗೆದುಕೊಂಡು ಹೋಗಿದ್ದ ತೂಕದ ಯಂತ್ರದಿಂದ ತೂಕ ಮಾಡಲಾಗಿ ಅದು 200 ಗ್ರಾಂ ತೂಕ ಇರುವುದು ಕಂಡು ಬಂದಿರುತ್ತದೆ. ನಂತರ ಗಾಂಜಾ ಮತ್ತು ಕಾರನ್ನು ಅಮಾನತ್ತು ಮಹಜರ್ ಮೂಲಕ ಅಮಾನತ್ತುಪಡಿಸಿಕೊಳ್ಳಲಾಗಿರುತ್ತದೆ. ನಂತರ ಗಾಂಜಾವನ್ನು ಬಿಳಿಬಟ್ಟೆಯಲ್ಲಿ ಹಾಕಿ ಸೀಲ್ ಮಾಡಿ ಅದರ ಮೇಲೆ ಪತ್ರಾಂಕಿತ ಅಧಿಕಾರಿ, ಪಂಚರು ಹಾಗೂ ನನ್ನ ಸಹಿಯುಳ್ಳ ಚೀಟಿಯನ್ನು ಅಂಟಿಸಲಾಗಿರುತ್ತದೆ. ಈ ಮಹಜರನ್ನು ಸಂಜೆ 6-20 ರಿಂದ 7-20 ರವರಿಗೆ ಠಾಣೆಯಿಂದ ತೆಗೆದುಕೊಂಡು ಹೋದ ಸರ್ಚ್ ಲೈಟ್ ಹಾಗೂ ಬೀದಿ ದೀಪಗಳ ಸಹಾಯದಿಂದ ಮಹಜರನ್ನು ಜರುಗಿಸಲಾಗಿರುತ್ತದೆ.

ನಂತರ ಸ್ಥಳದಲ್ಲಿ ಇದ್ದ ಪ್ರತ್ಯಕ್ಷ ಸಾಕ್ಷಿದಾರರಿಗೆ ನೋಟೀಸ್ ಜಾರಿ ಮಾಡಿ, ವಿಚಾರಣೆಗೆ ಠಾಣೆಗೆ ಹಾಜರಾಗುವಂತೆ ತಿಳಿಸಿರುತ್ತೇನೆ. ಅಮಾನತ್ ಮಹಜರ್ ಸಮಯ ಫೋಟೋ ತೆಗೆಸಿರುತ್ತೇನೆ. ನಂತರ ವಶಪಡಿಸಿಕೊಂಡ ಕಾರು, ವಶಕ್ಕೆ ಪಡೆದ ವಸೀಂ ಹಾಗೂ ಗಾಂಜಾದೊಂದಿಗೆ ಸಂಜೆ 7-45 ಗಂಟೆಗೆ ಠಾಣೆಗೆ ಬಂದು, ರಾತ್ರಿ 8-15 ರವರೆಗೆ ಸ್ವಪಿರ್ಯಾದನ್ನು

ತಯಾರಿಸಿರುತ್ತೇನೆ. ನನ್ನ ಸ್ವಪಿರ್ಯಾದು, ವಶಪಡಿಸಿಕೊಂಡ ವಸ್ತುಗಳು ಹಾಗೂ ಆರೋಪಿಯನ್ನು ಚಾಸಾ15 ರವರ ಮುಂದೆ ಹಾಜರುಪಡಿಸಿ, ಕಾನೂನು ಕ್ರಮ ಕೈಗೊಳ್ಳಲು ಹೇಳಿರುತ್ತೇನೆ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ.

ಪ್ರಾಂಶುಪಾಲರಿಗೆ ಬರೆದ ಪತ್ರವನ್ನು ನಿಪಿ-1 ಎಂದು ನನ್ನ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಮಹಜರು ಸಾಕ್ಷಿದಾರರಿಗೆ ನೀಡಿದ ನೋಟೀಸನ್ನು ನಿಪಿ-12 ಎಂದು ನನ್ನ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಗೆಜೆಟೆಡ್ ಅಧಿಕಾರಿಯಾಗಿ ಬರಬೇಕೆಂದು ಕೋರಿ ಪ್ರಾಂಶುಪಾಲರಿಗೆ ಬರೆದ ಪತ್ರವನ್ನು ನಿಪಿ-13 ಎಂದು ನನ್ನ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ತಹಸೀಲ್ದಾರರಿಗೆ ಬರೆದ ಪತ್ರವನ್ನು ನಿಪಿ-14 ಎಂದು ನನ್ನ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಧಾಳಿ ಮಾಡಲು ಅನುಮತಿ ಕೋರಿ ಎಸ್.ಪಿ. ರವರಿಗೆ ಬರೆದ ಪತ್ರವನ್ನು ನಿಪಿ-15 ಎಂದು ನನ್ನ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ಎಸ್.ಪಿ. ರವರಿಂದ ಪಡೆದುಕೊಂಡ ಶೋಧನಾ ವಾರೆಂಟನ್ನು ನಿಪಿ-16 ಎಂದು ನನ್ನ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಧಾಳಿ ಪೂರ್ವ ಮಹಜರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು ನನ್ನ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಧಾಳಿ ಪೂರ್ವ ಮಹಜರ್ ಸಮಯ ತೆಗೆದ ನಿಪಿ-3 ಮತ್ತು 4 ರಂತೆ ಇರುವ ಫೋಟೋಗಳನ್ನು ನೋಡಿ ಗುರುತಿಸಿರುತ್ತೇನೆ. ಸ್ಥಳ ಮತ್ತು ಅಮಾನತ್ತು ಮಹಜರನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು ನನ್ನ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ಅಮಾನತ್ತು ಮಹಜರ್ ಸಮಯ ತೆಗೆದ ನಿಪಿ-6 ರಿಂದ 9 ರಂತೆ ಇರುವ ಫೋಟೋಗಳನ್ನು ನೋಡಿ ಗುರುತಿಸಿರುತ್ತೇನೆ. ಆರೋಪಿಗೆ ನೀಡಿದ ನೋಟೀಸನ್ನು ನಿಪಿ-17 ಎಂದು ನನ್ನ ಸಹಿಗಳನ್ನು ನಿಪಿ-17(ಎ) ಮತ್ತು 17(ಬಿ) ಎಂದು ಗುರುತಿಸಲಾಯಿತು. ಠಾಣಾಧಿಕಾರಿಗೆ ನಾನು ನೀಡಿದ ವರದಿಯನ್ನು ನಿಪಿ-18 ಎಂದು ನನ್ನ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಎಂಕೆ. ವಕೀಲರಿಂದಃ 1 ಮತ್ತು 2 ನೇ ಆರೋಪಿತರ ಪರಃ**

ವರ್ತಮಾನ ಬಂದಾಗ ನಾನು ಕಛೇರಿಯಲ್ಲಿದ್ದೆ, ಆಗ ಸಮಯ ಮಧ್ಯಾಹ್ನ 3-30 ಆಗಿತ್ತು. ದಂಟರಮಕ್ಕಿಯಿಂದ ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದ ಮಾರ್ಗವಾಗಿ ಎಐಟಿ ಸರ್ಕಲ್ ಗೆ ಹೋಗುತ್ತಿದ್ದಾರೆ ಎಂದು ಮಾಹಿತಿ ಬಂದಿತ್ತು. ದಂಟರಮಕ್ಕಿಯ ಹತ್ತಿರ ಹೋಗಿ ಪರಿಶೀಲಿಸಿರುತ್ತೇನೆ, ಆದರೆ ಅಲ್ಲಿ 3 ರಸ್ತೆಗಳಿದ್ದು ತಪ್ಪಿಸಿಕೊಂಡು ಹೋಗುವ ಸಾಧ್ಯತೆ ಇದ್ದ ಕಾರಣ ನಾವು ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದ ಹತ್ತಿರ ಕಾಯುತ್ತಿದ್ದೆವು. ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದ ಹತ್ತಿರ 3 ರಿಂದ 4 ರಸ್ತೆಗಳು ಹಾದುಹೋಗುತ್ತವೆ ಎಂದರೆ ಸರಿಯಲ್ಲ. ಎಐಟಿ ಕಾಲೇಜ್ ಹತ್ತಿರ ಹೋಗಿ ಕಾಯಲು ಪ್ರಯತ್ನಪಟ್ಟಿರಾ ಎಂದರೆ, ಸಮಯದ ಅಭಾವದಿಂದ ನಾವು ಅಲ್ಲಿಗೆ ಹೋಗಲಿಲ್ಲ. ದಂಟರಮಕ್ಕಿಯಿಂದ ಎಐಟಿ ಸರ್ಕಲ್ ಗೆ ಕೆಎಂ ರಸ್ತೆಯಿಂದಲೂ ಹೋಗಬಹುದು, ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದ ರಸ್ತೆಯಿಂದಲೂ ಹೋಗಬಹುದು. ಹೆಚ್ಚಿನ ವಾಹನಗಳು ಕೆಎಂ ರಸ್ತೆಯಲ್ಲಿ ಓಡಾಡುತ್ತವೆ ಎಂದರೆ ಸರಿ, ನಮಗೆ ಬಂದ ಮಾಹಿತಿಯಂತೆ ಆ ವ್ಯಕ್ತಿ ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದ ಮಾರ್ಗವಾಗಿ ಹೋಗುತ್ತಾನೆ ಎಂಬುದಾಗಿತ್ತು. ದಂಟರಮಕ್ಕಿಯಿಂದ ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದ ರಸ್ತೆ ತುಂಬಾ ನೇರವಾಗಿರುತ್ತದೆ ಎಂದರೆ, ಸಂಪೂರ್ಣವಾಗಿ ನೇರವಾಗಿಲ್ಲ, ಬಹುತೇಕವಾಗಿ ನೇರವಾಗಿರುತ್ತದೆ. ಈ ರಸ್ತೆ ಸುಮಾರು ದೂರದಿಂದ ಕಾಣುತ್ತದೆ ಎಂದರೆ ಸರಿ. ಸುಮಾರು 100 ಮೀಟರ್ ದೂರದಲ್ಲಿ ಮೊದಲಿಗೆ ನಾವು ಆ ಕಾರನ್ನು ನೋಡಿರುತ್ತೇವೆ. ನಾವು ರಸ್ತೆಗೆ ನಮ್ಮ ವಾಹನವನ್ನ ಅಡ್ಡಲಾಗಿ ನಿಲ್ಲಿಸಿರಲಿಲ್ಲ ಅಥವಾ ಬ್ಯಾರಿಕೇಡ್ ಹಾಕಿರಲಿಲ್ಲ, ಕೈಸನ್ನೆಯಿಂದ ವಾಹನವನ್ನು ನಿಲ್ಲಿಸಿರುತ್ತೇವೆ. ಆ ಸಮಯ ನಾನು ಮತ್ತು ಚಾಸಾ6 ರವರು ಸಮವಸ್ತ್ರದಲ್ಲಿದ್ದೆವು. ನಮ್ಮನ್ನು ನೋಡಿ ಆ ವ್ಯಕ್ತಿ ತನ್ನ ವಾಹನವನ್ನು ತಿರುಗಿಸಲು ಪ್ರಯತ್ನಿಸಲಿಲ್ಲ. ನಾವು ಮರೆಯಲ್ಲಿ ನಿಂತು ಗಮನಿಸಿದ ಕಾರಣ ಆತನು ದೂರದಲ್ಲಿ ವಾಹನವನ್ನು ನಿಲ್ಲಿಸಿ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಲಿಲ್ಲ. ಆ ಸ್ಥಳದಲ್ಲಿ ಅಕ್ಕಪಕ್ಕದಲ್ಲಿ ಮನೆಗಳು ಇರುತ್ತವೆ ಮತ್ತು ಅದು ಜನನಿಬಿಡ ಪ್ರದೇಶವಾಗಿರುತ್ತದೆ ಎಂದರೆ ಸರಿಯಲ್ಲ. ಆ ಸ್ಥಳದಲ್ಲಿ ಯಾವುದೇ ಗಿರಾಕಿಗಳು ಇರಲಿಲ್ಲ.

ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಪ್ರಾಂಶುಪಾಲರಿಗೆ ಗೆಜೆಟೆಡ್ ಅಧಿಕಾರಿಯಾಗಿ ಬರಲು ಮತ್ತು ತಹಸೀಲ್ದಾರರಿಗೆ ಇಬ್ಬರು ಪಂಚರನ್ನು ಕಳಿಸುವಂತೆ ಪತ್ರ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ಪಂಚರಿಗೆ ನಾನು ಯಾವುದೇ ನೋಟೀಸ್ ಕೊಟ್ಟಿಲ್ಲ

ಎಂದರೆ ಸರಿಯಲ್ಲ. ಠಾಣೆಯಲ್ಲಿ ಪಂಚರ ಸಮಕ್ಷಮ ಯಾವುದೇ ಧಾಳಿಪೂರ್ವ ಮಹಜರನ್ನು ನಡೆಸಿಲ್ಲ ಎಂದರೆ ಸರಿಯಲ್ಲ. ನಾನು ಗೆಜೆಟೆಡ್ ಅಧಿಕಾರಿ, ಪಂಚರು ಹಾಗೂ ಸಿಬ್ಬಂದಿಗಳೊಂದಿಗೆ ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದ ಬಳಿ ಹೋಗಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ಕಾರಿನಲ್ಲಿ ಗಾಂಜಾವನ್ನು ಇಟ್ಟುಕೊಂಡು ಬರುತ್ತಿದ್ದ ಎಂದು ಹೇಳಿರುವುದು, ಆತನನ್ನು ನಾವು ತಡೆದು ಆತನಿಗೆ ನೋಟೀಸ್ ಜಾರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಗೆಜೆಟೆಡ್ ಅಧಿಕಾರಿಯು ವಾಹನವನ್ನು ಮತ್ತು ಆರೋಪಿಯನ್ನು ಶೋಧನೆ ಮಾಡಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಶೋಧನೆಯ ಸಮಯ ಕಾರಿನ ಡ್ಯಾಶ್ ಬೋರ್ಡಿನಲ್ಲಿ 200 ಗ್ರಾಂ ನಷ್ಟು ಗಾಂಜಾ ಇದ್ದು ಅದನ್ನು ನಾವು ತೂಕ ಮಾಡಿದ್ದೇವೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯನ್ನು ವಿಚಾರಿಸಿದಾಗ, 2 ನೇ ಆರೋಪಿಯು ಗಾಂಜಾವನ್ನು ಎಐಟಿ ಸರ್ಕಲ್ ನಲ್ಲಿ ವಿದ್ಯಾರ್ಥಿಳಿಗೆ ಮಾರಾಟ ಮಾಡಲು ನನಗೆ ಸರಬರಾಜು ಮಾಡುತ್ತಿದ್ದು ನಾನು ತಲಾ 10 ಗ್ರಾಂ ನಂತೆ ಚಿಕ್ಕ ಪ್ಯಾಕೆಟ್ ಗಳನ್ನು ಮಾಡಿ, ಒಂದು ಪ್ಯಾಕೆಟ್ ಗೆ ರೂ.300 ಗಳಂತೆ ಮಾರಾಟ ಮಾಡುತ್ತೇನೆ ಹಾಗೂ 2 ನೇ ಆರೋಪಿಯು ನನಗೆ ಶೇ.20 ಕಮಿಷನ್ ಕೊಡುತ್ತಾನೆ ಎಂದು 1 ನೇ ಆರೊಪಿ ತಿಳಿಸಿರುತ್ತಾನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಮಹಜರ್ ಮಾಡಿ, ಗಾಂಜಾ ಮತ್ತು ಕಾರನ್ನು ಹಾಗೂ ಆರೋಪಿಯನ್ನು ವಶಕ್ಕೆ ಪಡೆದಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃವಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿಜೆಎಂ., ಚಿಕ್ಕಮಗಳೂರು.